**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**
**<u>ಘನ ನ್ಯಾಯಾಲಯದಲ್ಲಿ</u>**

**<u>ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ *6/2014*</u>**

**ದಿನಾಂಕಃ *15.06.2023***
*(ಸಾಕ್ಷಿಗೆ ಪ್ರಮಾಣ* **ಮಾಡಿಸಲಾಯಿತು.**)

**ಪ್ರಾ.ಸಾಃ *2*** **(ಚಾ.ಸಾ.*3* )**

| | | |
|---|---|---|
| ಹೆಸರು | ಃ | ಎಂ ಮಂಜುನಾಥ |
| ತಂದೆಯ ಹೆಸರು | ಃ | ಮುನಿಸ್ವಾಮಾಚಾರ್ |
| ವಯಸ್ಸು | ಃ | *54* ವರ್ಷ |
| ಉದ್ಯೋಗ | ಃ | ಪ್ರಥಮ ದರ್ಜೆ ಸಹಾಯಕರು ತಾಲ್ಲೂಕು ಕಛೇರಿ ರಾಮನಗರ |
| ವಾಸ ಸ್ಥಳ | ಃ | **ರಾಮನಗರ** |

**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ</u>**

ನಾನು *2012* ರಲ್ಲಿ ರಾಮನಗರ ತಾಲ್ಲೂಕು ಕಛೇರಿಯಲ್ಲಿ ಆರ್ ಆರ್ ಟಿ ಸೆಕ್ಷನ್ ನಲ್ಲಿ ಗ್ರಾಮಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು.

*2.* ದಿ.*22.11.2012* ರಂದು ನಾನು ಕಛೇರಿಯಲ್ಲಿದ್ದಾಗ ನಮ್ಮ ಮೇಲಾಧಿಕಾರಿಗಳು ನನ್ನನ್ನು ಕರೆದು ಲೋಕಾಯುಕ್ತ ಪೋಲೀಸರು ಒಂದು ಕೇಸಿನಲ್ಲಿ ಪಂಚರನ್ನು ಕಳುಹಿಸಿಕೊಡಿ ಎಂದು ಕೇಳಿದ್ದಾರೆ ನೀವು ಹೋಗಿ ತನಿಖೆಗೆ ಸಹಕರಿಸಿ ಅಂತ ಹೇಳಿದರು ಮದ್ಯಾಹ್ನ *2.30* ಗಂಟೆಗೆ ನಾನು ರಾಮನಗರ ಲೋಕಾಯುಕ್ತ ಕಛೇರಿಗೆ ಹೋಗಿ ಪೋಲೀಸ್ ನೀರೀಕ್ಷಕರಾದ ಬೆಂಗಲಿಂಗಯ್ಯ ಇವರನ್ನು ಭೇಟಿ ಮಾಡಿದೆನು. ಅದೇ ವೇಳೆಗೆ ಇನ್ನೊಬ್ಬರು ಮಹದೇವಸ್ವಾಮಿ ಎಂಬ ಗ್ರಂಧಾಲಯ ಸಹಾಯಕರು ಅಲ್ಲಿಗೆ ಬಂದರು. ಆ ಸಮಯದಲ್ಲಿ ಅಲ್ಲೇ ಪಿರ್ಯಾದುದಾರರು ರಾಮದಾಸು ಎಂಬುವವರು ಇದ್ದರು ಅವರನ್ನು ಇನ್ಸ್ ಪೆಕ್ಟರ್ ರವರು ಅವರನ್ನು ಪರಿಚಯ ಮಾಡಿಕೊಟ್ಟರು. ಪಂಚಾಯಿತಿ ರೋಜಗಾರ್ ಯೋಜನೆ ಕಾಮಗಾರಿಯಲ್ಲಿ ಪಂಚಾಯಿತಿ ಸೆಕ್ರಟರಿಯಾದ ಬಸವಲಿಂಗಯ್ಯರವರು

ಕಾಮಗಾರಿ ಚೆಕ್ ಕೊಡಲು *10* ಸಾವಿರ ರೂ ದುಡ್ಡು ಕೇಳಿದ್ದಾರೆಂದು ಸದರಿ ಸಂಭಾಷಣೆಯನ್ನು ದೂರುದಾರ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದಾನೆ ಎಂದು ತಿಳಿಸಿದರು. ಮೊಬೈಲ್ ನಲ್ಲಿಯ ಸಂಭಾಷಣೆಯನ್ನ ನಮಗೆ ಕೇಳಿಸಿದರು. ಸದರಿ ಸಂಭಾಷಣೆಯನ್ನ ಟೈಪ್ ಮಾಡಿಕೊಂಡೆವು. ಮಹದೇವಸ್ವಾಮಿಯವರನ್ನ ಪಂಚ *1* ಎಂದು, ನನ್ನನ್ನು ಪಂಚ *2* ಎಂದು ನೇಮಕ ಮಾಡಿದರು. ಪಿರ್ಯಾದುದಾರರು ಲೋಕಾಯುಕ್ತ ಅಧಿಕಾರಿಗಳಿಗೆ *1*ನೇ ಆರೋಪಿ ವಿರುದ್ದ ದೂರು ಕೊಟ್ಟಿದ್ದರು. ಪಿರ್ಯಾದಿಯನ್ನ ದೂರಿನ ವಿಷಯವನ್ನು ನಾವು ಕೇಳಿ ತಿಳಿದುಕೊಂಡೆವು. ತನಿಖಾಧಿಕಾರಿಯ ಮುಂದೆ *1* ಸಾವಿರ ರೂ ಮುಖ ಬೆಲೆಯ *10* ನೋಟುಗಳನ್ನು ಹಾಜರುಪಡಿಸಿದರು. ತನಿಖಾಧಿಕಾರಿಗಳು ನೋಟುಗಳನ್ನು ಟೇಬಲ್ ಮೇಲೆ ಇಟ್ಟು ಅವುಗಳ ನಂಬರ್, ಮುಖಬೆಲೆ ಇತ್ಯಾದಿಗಳನ್ನು ಒಂದು ಬಿಳಿ ಹಾಳೆಯಲ್ಲಿ ನಾನು ಬರೆದನು ನಾನು ನೋಟ್ ಗಳನ್ನು ನೋಡಿದೆ. ನೋಟುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ನೋಟುಗಳ ವಿವರ ಉಳ್ಳ ಬಿಳಿ ಹಾಳೆಯನ್ನು ಈಗಾಗಲೇ ನಿಪಿ-*2* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*2* ಬಿ ಎಂದು ಗುರುತಿಸಲಾಯಿತು.

*3.* ಸದರಿ ನೋಟುಗಳಿಗೆ ತನಿಖಾಧಿಕಾರಿ ತನ್ನ ಸಿಬ್ಬಂದಿ ಮೂಲಕ ಪೆನಾಪ್ತಲಿನ್ ಪೌಡರ್ ಅನ್ನು ಲೇಪಿಸಿದರು. ನಂತರ ಸದರಿ ನೋಟುಗಳನ್ನು ಪಂಚ *1* ಮಹದೇವಸ್ವಾಮಿಯವರ ಕೈಗೆ ಕೊಟ್ಟರು ನಂತರ ಅವರು ಸದರಿ ನೋಟಿನ ನಂಬರ್ ಮತ್ತು ವಿವರಗಳನ್ನು ತಾಳೆ ಮಾಡಿ ಖಾತರಿ ಪಡಿಸಿಕೊಂಡರು. ಪೆನಾಪ್ತಲಿನ್ ಪೌಡರ್ ನ ಗುಣಧರ್ಮಗಳ ನಮಗೆ ತನಿಖಾಧಿಕಾರಿಗಳು ವಿವರಿಸಿ ಹೇಳಿದರು. ಸದರಿ ನೋಟುಗಳನ್ನು ತನಿಖಾಧಿಕಾರಿಗಳು ಒಂದು ಕವರ್ ಗೆ ಹಾಕಿ ದೂರುದಾರರಿಗೆ ಕೊಟ್ಟು ಆರೋಪಿ ಬಸವಲಿಂಗಯ್ಯ ಕೇಳಿದಾಗ ಕೊಡಬೇಕು ಎಂದು ತಿಳಿಸಿದರು. ಪಿರ್ಯಾದಿದಾರರಿಗೆ ಪಂಚ *1* ಜೊತೆ ಚನ್ನಪಟ್ಟಣದಲ್ಲಿರುವ ಕೋಟೆ ರಸ್ತೆಯ *1*ನೇ ಅರೋಪಿಯ ಕಛೇರಿಗೆ ಹೋಗಬೇಕೆಂದು ಹೇಳಿದರು. ನಾನು ತನಿಖಾಧಿಕಾರಿ ಮತ್ತು ಸಿಬ್ಬಂದಿ ಜೊತೆ ಇರಬೇಕು ಎಂದು ಹೇಳಿದರು. ಈ ಎಲ್ಲಾ ಪ್ರಕ್ರಿಯೆಯನ್ನ *3.30* ರಿಂದ *4.00* ಗಂಟೆವರೆಗೆ ಬರವಣಿಗೆ ಮಾಡಿದರು. ಅದಕ್ಕೆ

ನಾನು ಸಹಿ ಹಾಕಿದೆನು. ಸಾಕ್ಷಿ ಗುರುತಿಸಿದ ಪ್ರಯೋಗಿಕ ಪಂಚನಾಮೆಯನ್ನು ನಿಪಿ-*18* ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*18* ಬಿ ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಈ ಪ್ರಕ್ರಿಯೆಯ ಪೋಟೊಗಳನ್ನು ತೆಗೆಸಿದರು. ಸಾಕ್ಷಿ ಗುರುತಿಸಿದ ಪೋಟೋಗಳನ್ನು ಈಗಾಗಲೇ ನಿಪಿ-*3* ರಿಂದ ನಿಪಿ-*17* ಎಂದು ಗುರುತಿಸಲಾಗಿದೆ.

*4.* ನಾನು ಪಿರ್ಯಾದಿಯ ಜೇಬನ್ನು ಪರೀಕ್ಷೆ ಮಾಡಿ ಜೇಬಿನಲ್ಲಿ ಏನು ಇಲ್ಲ ಎಂದು ಖಾತರಿ ಪಡಿಸಿದ ನಂತರ ಪಂಚ *1* ರವರು *1* ಸಾವಿರದ *10* ನೋಟುಗಳನ್ನು ಪಿರ್ಯಾದಿಯ ಜೇಬಿನಲ್ಲಿ ಇಟ್ಟರು.

*5.* ಸಂಜೆ *4.30* ಗಂಟೆಗೆ ಲೋಕಾಯುಕ್ತ ಸಿಬ್ಬಂದಿ, ತನಿಖಾಧಿಕಾರಿಯೊಂದಿಗೆ ನಾನು ಜೀಪ್ ನಲ್ಲಿ ಕೋಟೆ ರೋಡ್ ನ ಕಾರ್ನರ್ ನಲ್ಲಿ ಹೋಗಿ ನಿಂತೆವು ಪಂಚ-*1* ಇವರನ್ನು ಕರೆದುಕೊಂಡು ಲೋಕಾಯುಕ್ತ ಸಿಬ್ಬಂದಿ ಆರೋಪಿಯ ಕಛೇರಿಯ ಹತ್ತಿರ ಹೋದರು. ನಾವು ಇನ್ಸ್ ಪೆಕ್ಟರ್ ಜೊತೆಯಲ್ಲಿ ಸುಮಾರು *50-60* ಅಡಿ ದೂರದಲ್ಲಿ ಇದ್ದು ಗಮನಿಸುತ್ತಿದ್ದೆವು. ಸಂಜೆ *6.15-6.30* ಗಂಟೆಗೆ ಪಂಚ *1* ಮತ್ತು ಪಿರ್ಯಾದಿ ಜೊತೆ ಹೋಗಿದ್ದ ಪೋಲೀಸ್ ಇನ್ಸ ಪೆಕ್ಟರ್ ನಮ್ಮ ಜೀಪ್ ಹತ್ತಿರ ಬಂದು ಅರೋಪಿಯನ್ನ ಟ್ರಾಪ್ ಮಾಡಿದ್ದೇವೆ ಅಂತ ಹೇಳಿದರು ಆಗ ನಾವು ಇನ್ಸ ಪೆಕ್ಟರ್ ಜೊತೆಗೆ ಆನಂದ್ ಎಲೆಕ್ಟ್ರಿಕಲ್ ಅಂಗಡಿಯ ಹತ್ತಿರ ಹೋದೆವು. ಅಲ್ಲಿ ಹೋಗಿ ಆನಂದ್ ಇವರನ್ನ ತನಿಖಾಧಿಕಾರಿ ವಿಚಾರಿಸಿ ನಿಮಗೆ ಯಾರು ಹಣ ಕೊಟ್ಟರು ಎಂದು ಕೇಳಿದರು. ಅದಕ್ಕೆ ಅವರು ಪಿರ್ಯಾದಿ ಕೊಟ್ಟಿದ್ದಾನೆ ಎಂದು ಹೇಳಿದರು. ಸೆಕ್ರೆಟರಿ ಅವರು ಹಣ ತೆಗೆದುಕೋ ಎಂದು ಹೇಳಿದ್ದರಿಂದ ನಾನು ಹಣ ತೆಗೆದುಕೊಂಡಿದ್ದಾಗಿ ಆರೋಪಿ ಅನಂದ ತಿಳಿಸಿದ.

*6.* ನಾನು ಪಂಚ-*1* ಮತ್ತು ಪಿರ್ಯಾದಿಯನ್ನ ವಿಚಾರಿಸಿದೆ ಅದಕ್ಕೆ ಪಿರ್ಯಾದಿ ಬಸವಲಿಂಗಯ್ಯ ಇವರು ಆನಂದ್ ಇವರಿಗೆ ಹಣ ತೆಗೆದುಕೋ ಎಂದು ಹೇಳಿದ್ದರಿಂದ ಆನಂದ್ ರವರು ನನ್ನಿಂದ ಹಣವನ್ನು ಕೇಳಿ ಪಡೆದುಕೊಂಡರು

ಎಂದು ಹೇಳಿದರು. ಸದರಿ ಆರೋಪಿ ಆನಂದ ಇಂದು ನ್ಯಾಯಾಲಯದಲ್ಲಿ ಇರುತ್ತಾರೆ.

*7.* ಆರೋಪಿ ಆನಂದ ತನ್ನ ಪ್ಯಾಂಟಿನ ಎಡಗಡೆ ಜೇಬಿನಿಂದ ಹಣವನ್ನು ತೆಗೆದು ತನಿಖಾಧಿಕಾರಿ ಕೈಗೆ ಕೊಟ್ಟರು. ಸದರಿ ನೋಟುಗಳನ್ನ ನಿಪಿ-*2* ರ ಜೊತೆ ತಾಳೆ ಮಾಡಿ ನೋಡಿದಾಗ ಪಿರ್ಯಾದಿ ಪ್ರಯೋಗಿಕ ಪಂಚನಾಮೆ ಕಾಲಕ್ಕೆ ಕೊಟ್ಟ ನೋಟುಗಳು ಅಗಿದ್ದವು. ಸದರಿ ನೋಟುಗಳನ್ನು ತನಿಖಾಧಿಕಾರಿಗಳು ಒಂದು ಕವರ್ ನಲ್ಲಿ ಹಾಕಿ ಸೀಲ್ ಮಾಡಿ ವಶಪಡಿಸಿಕೊಂಡರು. ಶರ್ಟಿನ ಜೇಬನ್ನ ಒಂದು ದ್ರಾವಣದಲ್ಲಿ ತೊಳೆಸಿದರು ಅದು ನೀಲಿ ಬಣ್ಣಕ್ಕೆ ತಿರುಗಿತು. ಬಣ್ಣ ಬದಲಾವಣೆ ಆಯಿತು ಆದರೆ ಯಾವ ಬಣ್ಣ ಎಂದು ನೆನಪಿಲ್ಲ ಎಂದು ಸಾಕ್ಷಿ ಪುನಃ ಹೇಳುತ್ತಾರೆ. ಸದರಿ ದ್ರಾವಣವನ್ನು ಒಂದು ಬಾಟಲಿಯಲ್ಲಿ ಹಾಕಿ ಸ್ವಾಧೀನ ಪಡಿಸಿಕೊಂಡರು. ಸಾಕ್ಷಿ ಗುರುತಿಸಿದ ಸದರಿ ಬಾಟಲಿಯನ್ನು ಮು ಮಾಲು *5* ಎಂದು ಗುರುತಿಸಲಾಯಿತು. ಆರೋಪಿ ಆನಂದ್ ಈತನ ಶರ್ಟ್ ಅನ್ನು ಪೋಲೀಸರು ಅಮಾನತ್ತು ಪಡಿಸಿಕೊಂಡರು ಸಾಕ್ಷಿ ಗುರುತಿಸಿದ ಶರ್ಟ್ ಅನ್ನು ಈಗಾಗಲೇ ಮು ಮಾ *3* ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಲೋಕಾಯುಕ್ತ ಪೋಲೀಸರು ಪೋಟೊಗಳನ್ನು ತೆಗೆಸಿದ್ದಾರೆ. ಸಾಕ್ಷಿ ಗುರುತಿಸಿದ ಪೋಟೋಗಳನ್ನು ನಿಪಿ-*19* ರಿಂದ ನಿಪಿ-*31* ಎಂದು ಗುರುತಿಸಲಾಗಿದೆ. ಅದಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ಮಹಜರು ಮಾಡಿದರು. ಸಾಕ್ಷಿ ಗುರುತಿಸಿದ ಮಹಜರನ್ನು ಈಗಾಗಲೇ ನಿಪಿ-*32* ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ-*32* ಬಿ ಎಂದು ಗುರುತಿಸಲಾಯಿತು.

*8.* ನಂತರ ಆರೋಪಿ ಆನಂದ್ ಇತನೊಂದಿಗೆ ಲೋಕಾಯುಕ್ತ ಸಿಬ್ಬಂದಿ ನಾವು ಲೋಕಾಯುಕ್ತ ಕಛೇರಿಗೆ ಬಂದೆವು. ಅಂದು *1* ನೇ ಅರೋಪಿ ಸಿಗದೇ ಇದ್ದ ದ್ದರಿಂದ ಮರುದಿವಸ ಬನ್ನಿ ಎಂದು ತನಿಖಾಧಿಕಾರಿಗಳು ನನಗೆ ತಿಳಿಸಿದರು.

*9.* ಮಾರನೇ ದಿವಸ ನಾನು ಮತ್ತು ಪಂಚ-*1* ಲೋಕಾಯುಕ್ತ ಕಛೇರಿಗೆ ಹೋಗಿದ್ದೆವು, ಆಗ *1* ನೇ ಅರೋಪಿ ಬಸವಲಿಂಗಯ್ಯ ಅಲ್ಲಿಗೆ ಬಂದರು.

ಅವರನ್ನು ಲೋಕಾಯುಕ್ತ ಅಧಿಕಾರಿಗಳು ವಿಚಾರಿಸಿ ಕೋರ್ಟ್ ಗೆ ಕರೆದುಕೊಂಡು ಹೋದರು.

***10.*** ಪಿರ್ಯಾದಿಗೆ ಸಂಬಂದಪಟ್ಟ ದಾಖಲೆಗಳನ್ನು ಪೋಲೀಸರು ನನ್ನ ಸಮಕ್ಷಮ ವಶಪಡಿಸಿಕೊಂಡಿಲ್ಲ. ಆನಂತರ ಲೋಕಾಯುಕ್ತ ಪೋಲೀಸರು ನನ್ನನ್ನು ಲೋಕಾಯುಕ್ತ ಕಛೇರಿಗೆ ಕರೆಸಿಲ್ಲ.

***11.*** ಲೋಕಾಯುಕ್ತ ಅಧಿಕಾರಿಗಳು ನನ್ನ ಹೇಳಿಕೆಯನ್ನು ಮಾರನೇ ದಿನ ಪಡೆದುಕೊಂಡಿರುತ್ತಾರೆ.

**ವಿಶೇಷ ಅಭಿಯೋಜಕರ ವಿನಂತಿಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕಃ** ***21.09.2023***

*(ಸಾಕ್ಷಿಗೆ ಪ್ರಮಾಣ **ಮಾಡಿಸಲಾಯಿತು.**)*

**<u>ವಿಶೇಷ ಅಭಿಯೋಜಕರ ವಿನಂತಿಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು:</u>**

*12.* ಟ್ರ್ಯಾಪ್ ಪಂಚನಾಮೆ ಮುಗಿದ ಮೇಲೆ ಲೋಕಾಯುಕ್ತ ಅಧಿಕಾರಿಗಳು ನಮ್ಮನ್ನು ರಾಂಪುರ ಗ್ರಾಮಪಂಚಾಯ್ತಿಗೆ ಕರೆದುಕೊಂಡು ಹೋಗಿ ದಾಖಲೆಗಳನ್ನು ವಶಪಡಿಸಿಕೊಂಡರು. ಆ ಬಗ್ಗೆ ಅಲ್ಲಿ ಬರವಣಿಗೆ ಮಾಡಿದರು, ಅದಕ್ಕೆ ನಾನು ಸಹಿ ಮಾಡಿದೇನೆ. ಸದರಿ ಪಂಚನಾಮೆಯನ್ನು ನಿಪಿ *33* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ *33 (*ಬಿ*)* ಎಂದು ಗುರುತಿಸಲಾಯಿತು.

*13.* ಆ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೀರಾ ಎಂದರೆ ಗುರುತಿಸುತ್ತೇನೆ. ಸದರಿ ದಾಖಲೆಗಳನ್ನು ಒಟ್ಟಾಗಿ ನಿಪಿ *36* ಎಂದು ಗುರುತಿಸಲಾಯಿತು. ಅವು ಪುಟ ಸಂ.*221* ರಿಂದ *278* ರವರೆಗೆ ಇರುತ್ತವೆ. ಪುಟ ಸಂ.*221* ರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ *36 (*ಎ*)* ಎಂದು ಗುರುತಿಸಲಾಯಿತು.

*14.* ದಿ:*10.12.2012* ರಂದು ಲೋಕಾಯುಕ್ತ ಪೊಲೀಸರು ನಾನು ಮತ್ತು ಪಂಚ ಸಾಕ್ಷಿ *1* ಇವರನ್ನು ಲೋಕಾಯಕ್ತ ಕಚೇರಿಗೆ ಕರೆಸಿದರು. ಅಲ್ಲಿ ಪಂಚಾಯ್ತಿ ಇಲಾಖೆಯ ಕಾರ್ಯನಿರ್ವಹಣಾಧಿಕಾರಿ ರವಿಕುಮಾರ ರವರು ಇದ್ದರು. ಮೊಬೈಲ್ ನಲ್ಲಿದ್ದ ಧ್ವನಿ ಸಂಭಾಷಣೆಯನ್ನು ಕೇಳಿದರು. ಅದಕ್ಕೆ ಅವರು ಸದರಿ ಸಂಭಾಷಣೆಯಲ್ಲಿರುವ ಧ್ವನಿ *1*ನೇ ಆರೋಪಿ ಬಸವಲಿಂಗಯ್ಯ ಅವರದೇ ಎಂದು ಗುರುತಿಸಿದ್ದರು.

*15.* ಸದರಿಯವರು ಪಿರ್ಯಾದಿಯೊಂದಿಗೆ ಮಾತನಾಡಿದ ಸಂಭಾಷಣೆ ಎಂದು ಗುರುತಿಸಿದರು. ಆ ಬಗ್ಗೆ ತನಿಖಾಧಿಕಾರಿಗಳು ಮಹಜರ್ ಮಾಡಿದರು. ಸಾಕ್ಷಿ ಗುರುತಿಸಿದ ಮಹಜರ್ ನ್ನು ನಿಪಿ *37* ಎಂದು, ಸಾಕ್ಷಿಯ ಸಹಿಯನ್ನು ನಿಪಿ *37(*ಎ*)* ಎಂದು ಗುರುತಿಸಲಾಯಿತು. ಆ ಮೊಬೈಲ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಮೊಬೈಲ್ ನ್ನು ಈಗಾಗಲೇ ಮು.ಮಾ. *4* ಎಂದು ಗುರುತಿಸಲಾಗಿದೆ.

*16.* ಸದರಿ ಸಂಭಾಷಣೆಯನ್ನು ಕಂಪ್ಯೂಟರ್ ಸಹಾಯದಿಂದ ವರ್ಗಾಯಿಸಿ ಒಂದು ಸಿಡಿ ತಯಾರಿಸಿದರು.

*17.* ಸೀಲಾದ ಕವರ್ ನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಸಾಕ್ಷಿ ಗುರುತಿಸಿದ ಸದರಿ ಸಿಡಿಯನ್ನು ಆರೋಪಿ ಪರ ವಕೀಲರ ಆಕ್ಷೇಪಣೆಗೆ ಒಳಪಟ್ಟು ನಿಪಿ *38* ಎಂದು ಗುರುತಿಸಲಾಯಿತು. (ಸೆಕ್ಷೆನ್ *65* ಬಿ ಎವಿಡೆನ್ಸ್ ಆಕ್ಟ್ ಪ್ರಕಾರ ಸರ್ಟಿಫಿಕೇಟ್ ನ್ನು ಹಾಜರುಪಡಿಸಿರುವುದಿಲ್ಲ.)

**(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ :</u>**

*18.* ದಿಃ*22.11.2012* ರಂದು ನಾನು, ಪಂಚ *1* ಮತ್ತು ದೂರುದಾರ ಮತ್ತು ಪೊಲೀಸ್ ಸಿಬ್ಬಂದಿ ಸಂಜೆ *06.30* ಗಂಟೆಗೆ ಚನ್ನಪಟ್ಟಣ ಕೋಟೆ ರಸ್ತೆಯ *1* ನೇ ಆರೋಪಿಯ ಕಛೇರಿ ಹತ್ತಿರ ಹೋಗಿದೆವು ಎಂದರೆ ಸರಿ. ತನಿಖಾಧಿಕಾರಿಗಳು ಪಿರ್ಯಾದಿ ಮತ್ತು ಪಂಚ *1* ರವರನ್ನು ಸೂಚನೆ ಕೊಟ್ಟು *1* ನೇ ಆರೋಪಿಯ ಕಚೇರಿಯ ಬಳಿ ಕಳುಹಿಸಿಕೊಟ್ಟರು ಎಂದರೆ ಸರಿ.

*19.* ಪಿರ್ಯಾದಿ ಅಲ್ಲಿ ಹೋಗಿ ವಾಪಸ್ಸು ಬಂದು *1* ನೇ ಆರೋಪಿ ಕಛೇರಿಯಲ್ಲಿ ಇಲ್ಲ ರೂಂ ಬಾಗಿಲು ಹಾಕಿದೆ ಎಂದು ತಿಳಿಸಿದರು ಎಂದರೆ ಸರಿ. ಆರೋಪಿಯ ಮೊಬೈಲ್ ಗೆ ಫೋನ್ ಮಾಡಿ ವಿಚಾರಿಸುವಂತೆ ದೂರುದಾರರಿಗೆ ತನಿಖಾಧಿಕಾರಿ ಹೇಳಿದ ಮೇರೆಗೆ ಮೊಬೈಲ್ ಫೋನ್ ಮಾಡಿ ಅದು ಸ್ವಿಚ್ ಆಫ್ ಬರುತ್ತಿದೆ ಎಂದು ದೂರುದಾರ ತನಿಖಾಧಿಕಾರಿಗಳಿಗೆ ತಿಳಿಸಿದ ಎಂದರೆ ಸರಿ.

*20.* ಆರೋಪಿ ಅಷ್ಟರಲ್ಲಿ ಕೆಳಗಡೆ ಇರುವ ಆನಂದ ಎಲೆಕ್ಟ್ರಿಕಲ್ಸ್ ಹತ್ತಿರ ಬಂದಾಗ, ಪಿರ್ಯಾದಿ ಅವರನ್ನು ಚೆಕ್ ಬಗ್ಗೆ ವಿಚಾರಿಸಿದರು ಆಗ *1* ನೇ ಆರೋಪಿ ಹಣ ತಂದಿದ್ದೀಯಾ ಎಂದು ಕೇಳಿದರು, ಪಿರ್ಯಾದಿದಾರ ಹಣ ತಂದಿದ್ದೇನೆ ಎಂದು *1* ನೇ ಆರೋಪಿಗೆ ಕೊಡಲು ಹೋದಾಗ ಅವರು *2* ನೇ ಆರೋಪಿ ಆನಂದ ಗೆ

ಕೊಡುವಂತೆ ತಿಳಿಸಿದರು. 2ನೇ ಆರೋಪಿ ಆನಂದ ಗೆ 10,000/- ರೂ.ಗಳನ್ನು ಪಿರ್ಯಾದಿದಾರ ಕೊಟ್ಟಾಗ ಅವರು ತಮ್ಮ ಬಲಗೈನಲ್ಲಿ ತೆಗೆದುಕೊಂಡು ಎರಡು ಕೈಯಲ್ಲಿ ಎಣಿಸಿ ತಮ್ಮ ಶರ್ಟಿನ ಜೇಬಿನಲ್ಲಿ ಹಾಕಿಕೊಂಡರು ಎಂದರೆ ಸರಿ.

21. ನಂತರ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಪ್ರಭುರಾಜೇಅರಸ್ ಇವರಿಗೆ 2 ಬಟ್ಟಲುಗಳಿಗೆ ಸೋಡಿಯಂ ಕಾರ್ಬೋನೇಟ್ ನ್ನು ತಯಾರಿಸುವಂತೆ ಹೇಳಿದರು, ಆ ಪ್ರಕಾರ ಸದರಿ ಸಿಬ್ಬಂದಿ 2 ಬಟ್ಟಲುಗಳಲ್ಲಿ ದ್ರಾವಣ ತಯಾರಿಸಿದರು ಸದರಿ ಬಟ್ಟಲುಗಳಿಂದ ಸ್ವಲ್ಪ ಸ್ವಲ್ಪ ದ್ರಾವಣವನ್ನು ತೆಗೆದು ಬಾಯಿ ಮುಚ್ಚಿ ಡಬ್ಲ್ಯೂಡಬ್ಲ್ಯೂ ಎಂಬ ಅಕ್ಷರದಿಂದ ಸೀಲ್ ಮಾಡಿ ವಶಪಡಿಸಿಕೊಂಡರು. ಸದರಿ ಬಾಟಲನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಮು.ಮಾ. 6 ಎಂದು ಗುರುತಿಸಲಾಯಿತು.

22. ಸೋಡಿಯಂ ಕಾರ್ಬೋನೇಟ್ ಇದ್ದ ಒಂದು ಬಟ್ಟಲನಲ್ಲಿ ಆರೋಪಿ ಆನಂದ ಈತನ ಕೈ ಬೆರಳುಗಳನು ಅದ್ದಿಸಿದ್ದರು ಆಗ ಸದರಿ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತ್ತು ಎಂದರೆ ಸರಿ. ಸದರಿ ದ್ರಾವಣವನ್ನು ಒಂದು ಬಾಟಲಿನಲ್ಲಿ ಹಾಕಿ ಬಾಯಿ ಮುಚ್ಚಿ ಡಬ್ಲ್ಯೂಡಬ್ಲ್ಯೂ ಎಂಬ ಅಕ್ಷರದ ಸೀಲ್ ಹಾಕಿ ತನಿಖಾಧಿಕಾರಿಗಳು ವಶಪಡಿಸಿಕೊಂಡರು ಎಂದರೆ ಸರಿ. ಸಾಕ್ಷಿ ಗುರುತಿಸಿದ ಬಾಟಲನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

23. ತನಿಖಾಧಿಕಾರಿಗಳು ನೀನು ಪಡೆದ ಲಂಚದ ಹಣ ಎಂದು ಆರೋಪಿ ಆನಂದನಿಗೆ ಕೇಳಿದಾಗ ತನ್ನ ಶರ್ಟಿನ ಜೇಬಿನಲ್ಲಿ ಲಂಚದ ಹಣವನ್ನು ಇಟ್ಟಿದೇನೆ ಎಂದು ಹೇಳಿದ ಆಗ ತನಿಖಾಧಿಕಾರಿಗಳು ಪಂಚ 1 ರವರಿಂದ ಆರೋಪಿಯ ಶರ್ಟಿನ ಜೇಬಿನಿಂದ ಲಂಚದ ಹಣವನ್ನು ತೆಗೆಸಿದರು. ಲೋಕಾಯುಕ್ತ ಕಛೇರಿಯಲ್ಲಿ ನೋಟಿನ ಸಂ. ಮತ್ತು ಮೌಲ್ಯ ಬರೆದ ಹಾಳೆಯೊಂದಿಗೆ ಸದರಿ ತಾಳೆ ಮಾಡಿ ನೋಡಲು ಸದರಿ ಹಣವನ್ನು ನನ್ನ ಕೈಗೆ ಕೊಟ್ಟರು, ನಾನು ಅದರಂತೆ ತಾಳೆ ಮಾಡಿ ನೋಡಿದಾಗ ಲೋಕಾಯುಕ್ತ ಕಛೇರಿಯಲ್ಲಿ ಪಿರ್ಯಾದಿ ಹಾಜರು ಮಾಡಿದ ಹಣ ಅದೇ ಆಗಿತ್ತು.

24. ಸದರಿ ವ್ಯಕ್ತಿ ನ್ಯಾಯಾಲಯದ ಮುಂದೆ ಇರುವ ಆರೋಪಿ 2 ಇರುತ್ತಾರೆ. ದಿಃ23.11.2012 ರಂದು ನಮ್ಮನ್ನು ರಾಂಪುರದ ಗ್ರಾಮ ಪಂಚಾಯ್ತಿ ಆಫೀಸ್ ಗೆ

ಕರೆದುಕೊಂಡು ಹೋಗಿ ನಿಪಿ *37* ದಾಖಲಾತಿಗಳನ್ನು ಹಾಜರುಪಡಿಸಿದ ವ್ಯಕ್ತಿ ನ್ಯಾಯಾಲಯದ ಮುಂದೆ ಇರುವ *1* ನೇ ಆರೋಪಿ ಇರುತ್ತಾರೆ.

*25.* ಲೋಕಾಯುಕ್ತ ಕಛೇರಿಯಲ್ಲಿ ಪ್ರಾಯೋಗಿಕ ಪಂಚನಾಮೆ ವೇಳೆಯಲಿಲ ಒಂದು ಬಟ್ಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಲಾಯಿತು, ಅದರಲ್ಲಿ ಸ್ವಲ್ಪ ದ್ರಾವಣವನ್ನು ತೆಗೆದು ಬಾಯಿ ಮುಚ್ಚಿ ಡಬ್ಲ್ಯೂ ಡಬ್ಲ್ಯೂ ಅಕ್ಷರದಿಂದ ಸೀಲ್ ಮಾಡಿ ಬಾಟಲನ್ನು ವಶಪಡಿಸಿಕೊಳ್ಳಲಾಯಿತು ಎಂದರೆ ಸರಿ. ಈಗ ನೋಡಿದ ಬಾಟಲಿ ಅದೇ ಬಾಟಲಿ ಇರುತ್ತದೆ ಎಂದರೆ ಸರಿ. ಸದರಿ ಬಾಟಲಿಯನ್ನು ಮು.ಮಾ. *7* ಎಂದು ಗುರುತಿಸಲಾಯಿತು.

*26.* ನೋಟುಗಳನ್ನು ಎಣಿಸಿದ ಪಂಚ *1* ಮಹದೇವಸ್ವಾಮಿ ಇವರ ಎರಡು ಕೈ ಬೆರಳುಗಳನ್ನು ಅದ್ದಿಸಿ ತೊಳೆದಾಗ ಸದರಿ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತ್ತು ಎಂದರೆ ಸರಿ. ಸದರಿ ದ್ರಾವಣವನ್ನು ಬಾಟಲಿಯಲ್ಲಿ ಹಾಕಿ ಮುಚ್ಚಳದಿಂದ ಮುಚ್ಚಿ ಡಬ್ಲ್ಯೂ ಡಬ್ಲೂ ಅಕ್ಷರದಿಂದ ಸೀಲ್ ಮಾಡಿ ವಶಪಡಿಸಿಕೊಳ್ಳಲಾಯಿತು ಎಂದರೆ ಸರಿ. ಸದರಿ ಬಾಟಲಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮು.ಮಾ. *8* ಎಂದು ಗುರುತಿಸಲಾಯಿತು.

*27.* ಟ್ರ್ಯಾಪ್ ಪಂಚನಾಮೆ ಮುಗಿದ ಮೇಲೆ ಆರೋಪಿ *2* ಆನಂದ ಇವರಿಗೆ ಸದರಿ ಹಣ ಪಡೆದ ಬಗ್ಗೆ ಸಮಜಾಯಿಷಿ ಕೇಳಿದಾಗ ಆತ ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದು ಹೇಳಿದ, ಆಗ ತನಿಖಾಧಿಕಾರಿಗಳು ಆರೋಪಿ ಮೌಖಿಕವಾಗಿ ಹೇಳಿದ ಸಮಜಾಯಿಷಿಯನ್ನು ತಮ್ಮ ಸಿಬ್ಬಂದಿ ಮೂಲಕ ಟೈಪ್ ಮಾಡಿಸಿ *2* ನೇ ಆರೋಪಿಗೆ ಓದಿ ಹೇಳಿದರು ಎಂದರೆ ಸರಿ. ಸದರಿ ದಾಖಲೆಗೆ *2* ನೇ ಆರೋಪಿ ಮತ್ತು ನಾನು ಸಹಿ ಹಾಕಿದೇವೆ ಎಂದರೆ ಸರಿ. *2* ನೇ ಆರೋಪಿಯ ಸಮಜಾಯಿಷಿ ಹೇಳಿಕೆಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ *39* ಎಂದು, ಸಾಕ್ಷಿಯ ಸಹಿಯನ್ನು *39(ಎ)* ಎಂದು ಗುರುತಿಸಲಾಯಿತು.

*28.* ದಿಃ*23.11.2012* ರಂದು *1* ನೇ ಆರೋಪಿ ಬಸವಲಿಂಗಯ್ಯ ಲೋಕಾಯುಕ್ತ ಕಛೇರಿಗೆ ಬಂದರು ಆಗ ನಾನು ಮತ್ತು ಪಂಚ *1* ಅಲ್ಲೇ ಇದ್ದೆವು ಆಗ *1* ನೇ ಆರೋಪಿ ತನ್ನ ಸಮಜಾಯಿಷಿ ಪತ್ರವನ್ನು ಬರೆದುಕೊಟ್ಟರು ಎಂದರೆ ಸರಿ. ಸಾಕ್ಷಿ

ಗುರುತಿಸಿದ ಸಮಂಜಾಯಿಷಿಯ ಹೇಳಿಕೆಯನ್ನು ನಿಪಿ *40* ಎಂದು, ಸಾಕ್ಷಿಯ ಸಹಿಯನ್ನು ನಿಪಿ *40(ಎ)* ಎಂದು ಗುರುತಿಸಲಾಯಿತು.

*29.* *2* ನೇ ಆರೋಪಿ ಎಲೆಕ್ಟ್ರಿಕ್ ಅಂಗಡಿ ಹತ್ತಿರ ತನಿಖಾಧಿಕಾರಿಗಳು ಒಂದು ಸ್ಥಳದ ನಕ್ಷೆ ತಯಾರಿಸಿದರು ಎಂದರೆ ಸರಿ. ಸಾಕ್ಷಿ ಗುರುತಿಸಿದ ನಕ್ಷೆಯನ್ನು ನಿಪಿ *41* ಎಂದು, ಸಾಕ್ಷಿಯ ಸಹಿಯನ್ನು ನಿಪಿ *41(ಎ)* ಎಂದು ಗುರುತಿಸಲಾಯಿತು.

*30.* ಘಟನೆ ಆಗಿ ಸುಮಾರು ವರ್ಷಗಳಾಗಿರುವುದರಿಂದ ನನಗೆ ಕೆಲವು ವಿಚಾರಗಳು ಮರೆತು ಹೋಗಿದ್ದವು ಎಂದರೆ ಸರಿ. ಪಿರ್ಯಾದಿ ತನಿಖಾಧಿಕಾರಿ ಮುಂದೆ ಹಾಜರು ಪಡಿಸಿದ ಹಣ ಮತ್ತು *2* ನೇ ಆರೋಪಿಯಿಂದ ಟ್ರ್ಯಾಪ್ ಪಂಚನಾಮೆ ವೇಳೆಗೆ ಅಮಾನತ್ತು ಪಡಿಸಿಕೊಂಡ ಹಣ ತೋರಿಸಿದರೇ ಗುರುತಿಸುತ್ತೇನೆ.

**ಆರೋಪಿತರ ಪರ ವಕೀಲರು ಉಪಸ್ಥಿತರಿಲ್ಲದ ಕಾರಣ ಪಾಟೀ ಸವಾಲಿಗಾಗಿ ಅನುಮತಿ ಕೊಡಬೇಕೆಂದು ವಿನಂತಿಸಿಕೊಂಡಿದ್ದು, ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕಃ** ***16.10.2023***
***(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)***

**ಮುಂದುವರೆದ ಮುಖ್ಯವಿಚಾರಣೆ ವಿಶೇಷ ಅಭಿಯೋಜಕರಿಂದಃ**

*1* ಸೀಲಾದ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿ *1,000/-* ಮುಖಬೆಲೆಯ *10* ನೋಟುಗಳಿರುತ್ತವೆ. ಪ್ರಾಯೋಜಕ ಪಂಚನಾಮೆಯ ವೇಳೆಗೆ ಪಿರ್ಯಾದಿ ಹಾಜರಿಪಡಿಸಿದ ಮತ್ತು ಟ್ರ್ಯಾಪ್ ಪಂಚನಾಮೆ ಕಾಲಕ್ಕೆ *2* ನೇ ಆರೋಪಿ ಕಡೆಯಿಂದ ವಶಪಡಿಸಿಕೊಂಡ ನೋಟುಗಳು ಈಗ ತೋರಿಸಿದ *1,000* ಮುಖಬೆಲೆಯ *10* ನೋಟುಗಳಾಗಿರುತ್ತವೆ. ಅವುಗಳನ್ನು ಒಟ್ಟಾಗಿ ಮು.ಮಾ. *9* ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

***31.*** ನಮ್ಮ ಮೇಲಾಧಿಕಾರಿಗಳು ಲೋಕಾಯಕ್ತ ಕಛೇರಿಗೆ ಹೋಗಿ ಪಂಚರಾಗಿ ಸಹಕರಿಸುವಂತೆ ಲಿಖಿತ ಆದೇಶ ಕೊಟ್ಟಿದ್ದರು, ಅದನ್ನು ತನಿಖಾಧಿಕಾರಿಗಳಿಗೆ ಕೊಟ್ಟಿರುತ್ತೇನೆ. ನಿಮ್ಮ ಕಛೇರಿಯಲ್ಲಿ ಮೂವ್ಮೆಂಟ್ ರಿಜಿಸ್ಟರ್ ಇರುತ್ತದೆ. ನಾವು ಹೊರಗಡೆ ಹೋಗಬೇಕಾದರೇ ಎಷ್ಟು ಗಂಟೆಗೆ ಯಾವ ಉದ್ದೇಶಕ್ಕೆ ಹೋಗುತ್ತಿದ್ದೇವೆ ಎಂದು ನಮೂದು ಮಾಡಿ ಹೋಗುತ್ತೇವೆ ಎಂದರೆ ಸರಿ.

***32.*** ದೂರಿನ ಜೊತೆಗೆ ಪಂಚಾಯ್ತಿಯಾಗಿ ದೂರುದಾರರಿಗೆ ಕೆಲಸ ವಹಿಸಿದ ಬಗ್ಗೆ ಅಗ್ರಿಮೆಂಟ್ ಏನಾದರೂ ಹಾಜರುಪಡಿಸಿದ್ದಾರಾ ಎಂದರೆ ನನಗೆ ತೋರಿಸಿಲ್ಲ. ಎಷ್ಟು ಮೊತ್ತದ ಚೆಕ್ಕ ಕೊಡಲಿಕ್ಕೆ ಆರೋಪಿಗಳು ಲಂಚದ ಹಣ ಬೇಡಿಕೆ ಇಟ್ಟಿದ್ದರು ಎಂದರೆ ಉಳಿಕೆ ***28,000/-*** ರೂ. ಹಣದ ಚೆಕ್ಕು ಕೊಡುವುದಕ್ಕೆ ಲಂಚದ ಬೇಡಿಕೆ ಇಟ್ಟಿದ್ದರು.

***33.*** ಉಳಿಕೆ ***28,000/-*** ರೂ. ಚಿಲ್ಲರೆ ಹಣ ಪಿರ್ಯಾದಿಗೆ ಸಂದಾಯವಾಗಬೇಕಾಗಿತ್ತು. ಕೆಂಪು ಬಣ್ಣದ ಎಂ.ಟಿ.ಎಸ್. ಮೊಬೈಲ್ ನಲ್ಲಿ ರೆಕಾರ್ಡ್ ಆದ ಸಂಭಾಷಣೆಯನ್ನು ನಮಗೆ ಕೇಳಿಸಿದರು. ಸಂಭಾಷಣೆ ಸುಮಾರು ***5-10***

ನಿಮಿಷದ್ದು ಇತ್ತು. ಲೋಕಾಯಕ್ತ ಕಛೇರಿಯ ಟೈಪಿಸ್ಟ್ ಶಾಂತಮ್ಮ ಸದರಿ ಸಂಭಾಷಣೆಯನ್ನು ಟೈಪ್ ಮಾಡಿ ಲಿಪಿಕರಣಗೊಳಿಸಿದರು.

*34.* *10,000/-* ರೂ.ಗಳ ಲಂಚದ ಹಣ ಆರೋಪಿ *1*-ಬಸವಲಿಂಗಯ್ಯ ಕೇಳಿದ್ದರು ಎಂಬ ವಿಷಯ ನನಗೆ ತಿಳಿದ್ದು ಬಂತು ಎಂದು ನನ್ನ ಹೇಳಿಕೆಯಲ್ಲಿ ನಾನು ಹೇಳಿಲ್ಲ ಎಂದರೆ ಸರಿಯಲ್ಲ. ಲೋಕಾಯುಕ್ತ ಕಛೇರಿ ಬಿಡುವ ವೇಳೆ ಆರೋಪಿ ಬಸವಲಿಂಗಯ್ಯ ಎಷ್ಟು ಗಂಟೆಗೆ ಬರುವಂತೆ ತಿಳಿಸಿದ್ದಾನೆ ಎಂದು ರಾಮದಾಸ್ ನಮ್ಮ ಮುಂದೆ ಹೇಳಿದರು.

*35.* ಚನ್ನಪಟ್ಟಣದ ತಮ್ಮ ಕಛೇರಿ ಹತ್ತಿರ ಬರುವಂತೆ ಆರೋಪಿ ಬಸವಲಿಂಗಯ್ಯ ತಿಳಿಸಿದ್ದನು. ಸಂಜೆ *05.15* ಗಂಟೆಗೆ ಪಂಚ-*1* ಮಹದೇವಸ್ವಾಮಿ ಮತ್ತು ಚಾಸಾ *1* ರಾಮದಾಸ ಆರೋಪಿ-*1* ಇವರ ಕಛೇರಿ ಹತ್ತಿರ ಹೋದಾಗ ಕಛೇರಿಗೆ ಬೀಗ ಹಾಕಿತ್ತು, *1* ನೇ ಆರೋಪಿ ಇರಲಿಲ್ಲ, ಚಾಸಾ *1* ಮತ್ತು *2* ರವರು ಕೆಳಗೆ ಇಳಿದ್ದು ಬಂದು ಕಛೇರಿಗೆ ಬೀಗ ಹಾಕಿದೆ, *1* ನೇ ಆರೋಪಿ ಇಲ್ಲ ಎಂದು ಹೇಳಿದರು.

*36.* *1* ನೇ ಆರೋಪಿಯ ಕಛೇರಿಗೂ ಮತ್ತು *2* ನೇ ಆರೋಪಿಯ ಎಲೆಕ್ಟ್ರಿಕಲ್ ಅಂಗಡಿಗೂ ಸುಮಾರು *50* ಅಡಿ ಅಂತರವಿದೆ. ನಂತರ ಲೋಕಾಯುಕ್ತ ಪೊಲೀಸರು ಚಾಸಾ *1* ರವರಿಂದ *1* ನೇ ಆರೋಪಿಗೆ ಫೋನ್ ಮಾಡಿಸಿ ಅವರು ಎಲ್ಲಿದ್ದಾರೆ ಎಂದ ತಿಳಿದುಕೊಳ್ಳುವ ಪ್ರಯತ್ನ ಮಾಡಿದರು, ಫೋನ್ ನಾಟ್ ರೀಚೇಬಲ್ ಬಂತು ಎಂದರೆ ಸರಿ.

*37.* ಚಾಸಾ *1* ರವರ ಕಡೆಯಿಂದ ಸಿಂಗ್ರಯ್ಯ, ಗ್ರಾಮ ಪಂಚಾಯ್ತಿ ಅಧ್ಯಕ್ಷರಿಗೆ ಫೋನ್ ಮಾಡಿಸಿ *1* ನೇ ಆರೋಪಿ ಎಲ್ಲಿ ಇದ್ದಾನೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದಾನೆ ಎಂದರೆ ಸರಿ. ಸದರಿ ಸಿಂಗ್ರಯ್ಯ ಅವರಿಗೂ ಕೂಡ *1* ನೇ ಆರೋಪಿ ಎಲ್ಲಿ ಇದ್ದಾನೆ ಎಂದು ಗೊತ್ತಿರಲಿಲ್ಲ ಎಂದು ತಿಳಿದು ಬಂತು ಎಂದರೆ ಸರಿ.

*38.* ಪಂಚ-*1*, ನಾನು, ಇನ್ಸ್ಪೆಕ್ಟರ್, ಲೋಕಾಯುಕ್ತ ಸಿಬ್ಬಂದಿ, ದೂರುದಾರ, ಆನಂದ ಎಲೆಕ್ಟ್ರಿಕ್ಸ್ ಅಂಗಡಿ ಹತ್ತಿರ ಸುಮಾರು ಅರ್ಧ ಮುಕ್ಕಾಲು ಗಂಟೆ ಕಾಯ್ದೆವು. ಲೋಕಾಯುಕ್ತ ಕಛೇರಿಯಲ್ಲಿ ಪೊಲೀಸರು ಚಾಸಾ *1* ರಾಮದಾಸ್

ರವರಿಗೆ ವಾಯ್ಸ್ ರೆಕಾರ್ಡ್ ರ್ ಕೊಟ್ಟು ಅವರ ಮತ್ತು *1* ನೇ ಆರೋಪಿ ಮಧ್ಯೆ ನಡೆಯಬಹುದಾದ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳುವಂತೆ ತಿಳಿಸಿದ್ದರು ಎಂದರೆ ಸರಿ.

*39.* ನಾವು ಆನಂದ ಎಲೆಕ್ಟ್ರಾನಿಕ್ಸ್ ಅಂಗಡಿ ಹತ್ತಿರ ಹೋದ ನಂತರ ಆ ದಿವಸ ಆರೋಪಿ *1* ರವರು ಅಲ್ಲಿಗೆ ಬರಲಿಲ್ಲ ಎಂದರೆ ಸರಿಯಲ್ಲ. ಚಾಸಾ *1* ರರಾಮದಾಸ್ ರವರು *1* ನೇ ಆರೋಪಿಗೆ ಹಣ ಕೊಡಲು ಹೋದಾಗ *2* ನೇ ಆರೋಪಿ ಆನಂದ ಗೆ ಕೊಡುವಂತೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯೇಲ್ಲ.

*40.* *1* ನೇ ಆರೋಪಿ ಮತ್ತು ಚಾಸಾ *1* ರಾಮದಾಸ್ ಇವರ ಮಧ್ಯೆ ಯಾವುದೇ ಸಂಭಾಷಣೆ ನಡೆಯದೇ ಇದ್ದರಿಂದ ಅದು ರೆಕಾರ್ಡ್ ಮಾಡಿಕೊಂಡಿಲ್ಲ ಅಂದರೆ ಸರಿಯಲ್ಲ.

*41.* ಲೋಕಾಯುಕ್ತ ಪೊಲೀಸರ ಮಾತು ಕೇಳಿ ಚಾಸಾ *1* ರವರು *1* ನೇ ಆರೋಪಿಯನ್ನು ಈ ಕೇಸಿನಲ್ಲಿ ಫಿಕ್ಸ್ ಮಾಡುವ ಸಲುವಾಗಿ *2* ನೇ ಆರೋಪಿ ಆನಂದ ಅವರ ಕೈಗೆ ಲಂಚದ ಹಣವನ್ನು ಕೊಡಿಸಿದರು ಎಂದರೆ ಸರಿಯಲ್ಲ.

*42.* *2* ನೇ ಆರೋಪಿಗೆ ಓದು ಬರಹ ಬರುವುದಿಲ್ಲ, ಆದ್ದರಿಂದ ಲೋಕಾಯಕ್ತ ಅಧಿಕಾರಿಗಳು ತಾವೇ ಡಿಕ್ಟೇಟ್ ಮಾಡಿ ಲೋಕಾಯಕ್ತ ಕಛೇರಿಯಲ್ಲಿ ಟೈಪ್ ಮಾಡಿಸಿದರು ಎಂದರೆ ಸರಿ. ರಾಂಪುರ ಗ್ರಾಮ ಪಂಚಾಯ್ತಿಗೆ ಹೋಗಿ ವಶಪಡಿಸಿಕೊಂಡ ದಾಖಲೆಗಳಲ್ಲಿ ಪಿರ್ಯಾದಿ ರಾಮದಾಸ್ ಕೆಲಸ ಮಾಡಿಸಿದ ಬಗ್ಗೆ ದಾಖಲಾತಿ ಇತ್ತಾ ಎಂದರೆ ಇರಲಿಲ್ಲ.

*43.* ನಾನು ಕಾಮಗಾರಿ ಚೆಕ್ಕುಗಳನ್ನು ಆಗಲೇ ಕೊಟ್ಟು ಬಿಟ್ಟಿದ್ದೇನೆ, ನಾನು ಅದಕ್ಕಾಗಿ ಲಂಚದ ಹಣ ಕೇಳಿಲ್ಲ ಎಂದು *1* ನೇ ಆರೋಪಿ ಸಮಾಜಾಯಿಷಿ ಕೊಟ್ಟಿದ್ದಾನೆ.

*44.* ಸದರಿ *28,000/-* ರೂ. ಉಳಿಕೆ ಹಣ ಕಾಮಗಾರಿಕೆಗೆ ಸಾಮಾಗ್ರಿಗಳನ್ನು ಒದಗಿಸಿದ ಸುನೀಲ್‌ಕುಮಾರ ಇವರಿಗೆ ಕೊಡಬೇಕಾದ ಹಣ ಎಂದು ನನಗೆ ಗೊತ್ತಾಯಿತು ಎಂದರೆ ಸರಿ.

*45.* ಸದರಿ ರೂ. *28,000/-* ಚಿಲ್ಲರೆ ಹಣದ ಚೆಕ್ಕು ಈ ಕೇಸು ದಾಖಲಾಗುವ *2* ದಿವಸಗಳ ಹಿಂದೆ ಸುನೀಲ್‌ಕುಮಾರಗೆ ಕೊಡಲಾಗಿತ್ತು ಎಂದರೆ ಗೊತ್ತಿಲ್ಲ.

*46.* ಈ *2* ಪಂಚನಾಮೆಗಳನ್ನು *1* ನೇ ಆರೋಪಿಯನ್ನು ಈ ಪ್ರಕರಣದಲ್ಲಿ ಸಿಲುಕಿಸುವ ಸಲುವಾಗಿ ಸುಳ್ಳು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ.

*47.* ಸದರಿ ನೋಟುಗಳನ್ನು ಪ್ರಾಯೋಗಿಕ ಪಂಚನಾಮೆಯ ಕಾಲಕ್ಕೆ ನಾರಾಯಣಪ್ಪ ಎಂಬುವವರು ಲೋಕಾಯಕ್ತ ಪೊಲೀಸರ ಮುಂದೆ ಹಾಜರು ಪಡಿಸಿದ್ದಾರೆ ಎಂದರೆ ಸರಿಯಲ್ಲ. ಲೋಕಾಯುಕ್ತ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

***(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)***

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**